# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ

**ಸೆಷನ್ಸ್ ಕೇಸ್ ನಂಃ 34/2025** ಪಿ.ಡಬ್ಲ್ಯೂ 6

ಸಿ.ಡಬ್ಲ್ಯೂ.5

| | |
|---|---|
| ಸಾಕ್ಷಿದಾರರ ಹೆಸರು | ನಂಧ್ಯಪ್ಪ |
| ತಂದೆಯ ಹೆಸರು | ಪಾಂಡುರಂಗ ಬಿರಾದರ |
| ವಯಸ್ಸು | 42 ವರ್ಷ |
| ಉದ್ಯೋಗ | ಕೃಷಿ |
| ವಿಳಾಸ | ಚಿಕ್ಕಲಕಿ, ಜಮಖಂಡಿ ತಾಲೂಕು |

ದಿನಾಂಕಃ 10-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನನಗೆ ಚಾಸಾ-1 ಮತ್ತು 2 ಗೊತ್ತು, ಅವರು ನಮ್ಮ ಊರಿನವರು. ಸುಮಾರು 10 ತಿಂಗಳ ಹಿಂದೆ ನಾವು ಊರಿನಲ್ಲಿ ಇದ್ದಾಗ, ಚಾಸಾ-1, 2 ಇವರಿಗೆ ಉಡುಪಿಯಲ್ಲಿ ಚಾಕುವಿನಿಂದ ಹಲ್ಲೆಯಾಗಿರುವ ಬಗ್ಗೆ ಚಾಸಾ-2 ಈತನ ಅಣ್ಣ ಹೇಳಿರುವುದಿಂದ ಗೊತ್ತು. ಅದಕ್ಕಾಗಿ ನಾವು ಉಡುಪಿಯ ಸರಕಾರಿ ಆಸ್ಪತ್ರೆಗೆ ಬಂದು ನೋಡಿದಾಗ, ಚಾಸಾ-1 ಮತ್ತು 2 ಇವರಿಗೆ ಪೆಟ್ಟಾಗಿತ್ತು.

2) ಕಳೆದ ವರ್ಷದ ಮಾರ್ಚ್ ತಿಂಗಳಿನಲ್ಲಿ ನಾವು ಬಂದ ಮಾರನೇ ದಿನ ನಮ್ಮನ್ನು ಪಂಚನಾಮೆಗೆ ಎಂದು ನನ್ನನ್ನು ಮತ್ತು ಚಾಸಾ-6 ಈತನನ್ನು ಪೊಲೀಸರು ಕರೆದುಕೊಂಡು ಹೋಗಿದ್ದರು, ಆಗ ನಮ್ಮ ಜೊತೆ ಇದ್ದ ಚಾಸಾ-2 ಜಾಗೆ ತೋರಿಸಿದ್ದ. ಅದಕ್ಕಾಗಿ ಬರೆದುಕೊಂಡ ಪೊಲೀಸರು ನಮ್ಮ ಸಹಿ ಪಡೆದಿದ್ದರು. ನಿಪಿ-8 ರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ನಿಪಿ-8(ಬಿ) ಎಂದು ಗುರುತಿಸಿದ್ದೇನೆ. ಆಗ ತೆಗೆದಿದ್ದ ಪೋಟೋಗವನ್ನು ಈಗಾಗಲೇ ನಿಪಿ-9 ಎಂದು ಗುರುತಿಸಿದೆ. ನಿಪಿ-9 ರಲ್ಲಿ ನಾನು, ಚಾಸಾ-6, 2, ಮತ್ತು ಪೊಲೀಸರು ಸಹ ಇದ್ದೇವೆ. ಆಗ 9.30 ರಿಂದ 10.00 ಗಂಟೆಯ ಸಮಯವಾಗಿತ್ತು.

**ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್.ಪಿ. (ಎಲ್.ಎ.ಡಿ.ಸಿ) ವಕೀಲರಿಂದ**

1) ಪೊಲೀಸರು ನನ್ನ ಹೇಳಿಕೆ ಮಾಡಿಲ್ಲ. ಆದಿನ ನನ್ನನ್ನು ಚಾಸಾ-2 ಕರೆದುಕೊಂಡು ಹೋಗಿದ್ದ. ನಾನು ಚಾಸಾ-2 ಇವರ ಸಂಬಂಧಿಕನಲ್ಲ, ಅವರ ಅಣ್ಣನ ಸ್ನೇಹಿತ. ನಿಪಿ-8ರ ಜಾಗೆ ಮಠದ ಪಾರ್ಕಿಂಗ್ ಜಾಗೆ ಎಂದರೆ, ಅಲ್ಲ, ಅದು ಪಕ್ಕದ ಖಾಲಿ ಜಾಗೆ. ಹತ್ತಿರದಲ್ಲಿಯೇ ಕಬ್ಬಿಣದ ಕೆಲಸ ನಡೆಯುತ್ತಿತ್ತು. ನಿಪಿ-8ರ ಜಾಗೆಯಲ್ಲಿ ರಕ್ತ ಬಿದ್ದ ಕಲೆಯ ಬಟ್ಟೆ ಇತ್ತು. ಅದು ಯಾರದ್ದು ಎಂದು ಗೊತ್ತಿಲ್ಲ. ಅದನ್ನು ಪೊಲೀಸರು ತೆಗೆದುಕೊಂಡಿದ್ದರು. ನಿಪಿ-9ರ ಪೋಟೋವನ್ನು ತೆಗೆಯಲು ಯಾರು ಹೇಳಿದ್ದರು ಎಂದು ಗೊತ್ತಿಲ್ಲ. ನಿಪಿ-8ರ ಜಾಗೆ ಗಟ್ಟಿ ನೆಲ ಎಂದರೆ ನಿಜ.

2) ಪೊಲೀಸರು ನಮ್ಮ ಸಹಿಯನ್ನು ಆಸ್ಪತ್ರೆಯಲ್ಲಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಅದನ್ನು ನಿಪಿ-8ರ ಜಾಗೆಯಲ್ಲಿ ಪಡೆದಿದ್ದರು. ನಮ್ಮ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-1, 2, ನಮ್ಮ ಸ್ನೇಹಿತರಾಗಿದ್ದರಿಂದ ಅವರ ಸಹಾಯಕ್ಕಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.

**ಪಿ.ಡಬ್ಲ್ಯೂ.6/ಸಿ.ಡಬ್ಲ್ಯೂ.5**